GULBARGA UNIVERSITY
"Jnana Ganga", GULBARGA - 585 106, Karnataka, India.
☎ 08472-263202
Fax. 08472-263206
E-Mail: root@guluni.kar.nic.in
Grams: UNIGUL

ಕ್ರ.ಸಂ.ಗುವಿಗು/ವಿಮವಿ/ಬಿ.ಎಡ್./2014-15/7619 ದಿನಾಂಕ: 24.01.2015

## ಸುತ್ತೋಲೆ

ವಿಷಯ: ಬಿ.ಎಡ್. ಕೋರ್ಸಿಗೆ ಶೇಕಡ್ 50 ಸೀಟು ಸರಕಾರದ ಕೋಟಾದಡಿಯಲ್ಲಿ ಮತ್ತು 50 ಸೀಟು ಆಡಳಿತ ಮಂಡಳಿಯಲ್ಲಿ ಭರ್ತಿ ಮಾಡುವದು ಹಾಗೂ 371(ಜೆ) ಅಧಿನಿಯಮದಂತೆ ಮೀಸಲಾತಿ ಅನುಸರಿಸುವ ಬಗ್ಗೆ.

ಉಲ್ಲೇಖ: ಸರಕಾರದ ಸುತ್ತೋಲೆ ಸಂ. ಇಡಿ/141/ಯುಆರ್‌ಸಿ/2014(ಭಾಗ-2) ಬೆಂಗಳೂರು, ದಿನಾಂಕ: 12.01.2014.

****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, 2014-15 ನೇ ಸಾಲಿಗೆ ಬಿ.ಎಡ್. ಪ್ರವೇಶಕ್ಕೆ ಶೇಕಡ 50 ಸೀಟು ಸರಕಾರದ ಕೋಟಾದಡಿಯಲ್ಲಿ ಮತ್ತು 50 ಸೀಟು ಆಡಳಿತ ಮಂಡಳಿಯಲ್ಲಿ ಭರ್ತಿ ಮಾಡುವುದು. ಪ್ರವೇಶಾತಿಗೆ ಕಡೆಯ ದಿನಾಂಕದ ನಂತರವೂ ಖಾಲಿ ಇರುವ ಸರಕಾರಿ ಕೋಟಾದ ಬಿ.ಎಡ್. ಸೀಟುಗಳನ್ನು ವಿಶ್ವವಿದ್ಯಾಲಯದಿಂದ ಆಕ್ಷೇಪಣ ರಹಿತ ಪತ್ರ ಪಡೆದು ಸರಕಾರದ ಅನುಮತಿ ಪಡೆದನಂತರವೆ ಆಡಳಿತ ಮಂಡಳಿಯವರು ಪ್ರವೇಶ ನೀಡಬೇಕು.

ಒಂದು ವೇಳೆ ವಿಶ್ವವಿದ್ಯಾಲಯದಿಂದ ನಿರಾಕ್ಷೇಪಣ ಪತ್ರ ಪಡೆಯದೆ ಮತ್ತು ಸರಕಾರದಿಂದ ಅನುಮತಿ ಪಡೆಯದೆ ಸರಕಾರದ ಕೋಟಾದಡಿ ಬಾಕಿ ಇರುವ ಸೀಟುಗಳನ್ನು ಭರ್ತಿ ಮಾಡಿದ್ದೇ ಆದಲ್ಲಿ ಅಂತಹ ಪ್ರವೇಶ ನಿಯಮಬಾಹಿರವಾಗುತ್ತದೆ. ಕಾರಣ ಪ್ರವೇಶ ಮಾನ್ಯಮಾಡಲಾಗುವುದಿಲ್ಲ.

ಮುಂದುವರೆದು, ತಿಳಿಸುವದೇನಂದರೆ ಬಿ.ಎಡ್. ಪ್ರವೇಶಾತಿಯಲ್ಲಿ 371(ಜೆ) ಅಧಿನಿಯಮದಡಿಯಲ್ಲಿ ನಿಗದಿ ಪಡಿಸಿರುವ ಮೀಸಲಾತಿಯನ್ನು ಕಡ್ಡಾಯವಾಗಿ ಅನುಸರಿಸಲೇಬೇಕೆಂದು ಈ ಮೂಲಕ ತಿಳಿಸಲಾಗಿದೆ.

27/1/15
ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಗೆ,
ಎಲ್ಲಾ ಶಿಕ್ಷಣ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ.

ಪ್ರತಿಗಳು:
1) ಕುಲಸಚಿವರು (ಮೌಲ್ಯಮಾಪನ), ಗು.ವಿ.ಗುಲಬರ್ಗಾ ರವರ ಮಾಹಿತಿಗಾಗಿ.
2) ಡೀನರು, ಶಿಕ್ಷಣ ನಿಕಾಯ, ಗು.ವಿ. ಗುಲಬರ್ಗಾ ರವರ ಮಾಹಿತಿಗಾಗಿ.
3) ವಿತ್ತಾಧಿಕಾರಿಗಳು, ಗು.ವಿ. ಗುಲಬರ್ಗಾ ರವರ ಮಾಹಿತಿಗಾಗಿ.
4) ಮುಖ್ಯಸ್ಥರು, ಶಿಕ್ಷಣ ವಿಭಾಗ, ಗು.ವಿ. ಗುಲಬರ್ಗಾ ರವರ ಮಾಹಿತಿಗಾಗಿ.
5) ಕುಲಪತಿಗಳ ಆಪ್ತಾ ಕಾರ್ಯದರ್ಶಿ / ಕುಲಸಚಿವರ ಆಪ್ತ ಸಹಾಯಕರ ಮಾಹಿತಿಗಾಗಿ.
6) ಮುಖ್ಯಸ್ಥರು, ಗಣಕಕೇಂದ್ರ ಇವರಿಗೆ ಯುನಿವರ್ಸಿಟಿ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಲಾಗಿದೆ.

D:\ACA Branch\ACA (Kannada) (C-3)]

P.T.O

URGENT

REGISTRAR OFFICE
No. 982
13 ...
...UNIVERSITY.

## ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 141 ಯುಆರ್‌ಸಿ 2014(ಭಾಗ-2)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:12.01.2014

### ಸುತ್ತೋಲೆ

* * *

ರಾಜ್ಯದ ಬಿಇಡಿ ಕಾಲೇಜುಗಳಲ್ಲಿ ಲಭ್ಯವಿರುವ ದಾಖಲಾತಿಗಳಲ್ಲಿ ಶೇಕಡ 50ರಷ್ಟು ಸೀಟುಗಳನ್ನು ಸರ್ಕಾರದ ಕೋಟಾದಡಿ ಮತ್ತು ಶೇಕಡ 50ರಷ್ಟು ಸೀಟುಗಳನ್ನು ಆಡಳಿತ ಮಂಡಳಿಯ ಕೋಟಾದಡಿ ಭರ್ತಿ ಮಾಡಿಕೊಳ್ಳಲು ಅವಕಾಶವಿರುತ್ತದೆ. ಸರ್ಕಾರಿ ಕೋಟಾದ ಸೀಟುಗಳನ್ನು ಕೇಂದ್ರಿಕೃತ ದಾಖಲಾತಿ ಘಟಕ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇಲ್ಲಿ ಕೌನ್ಸಲಿಂಗ್ ಮೂಲಕ ತುಂಬಿಕೊಳ್ಳಲಾಗುತ್ತದೆ. ಪ್ರವೇಶಾತಿಗೆ ಕಡೆಯ ದಿನಾಂಕದ ನಂತರವೂ ಖಾಲಿ ಇರುವ ಸರ್ಕಾರಿ ಕೋಟಾದ ಬಿಎಡ್ ಸೀಟುಗಳನ್ನು ವಿಶ್ವವಿದ್ಯಾಲಯದ ನಿರಾಕ್ಷೇಪಣಾ ಪತ್ರದೊಂದಿಗೆ ಸರ್ಕಾರದ ಅನುಮತಿ ಪಡೆದು ಆಡಳಿತ ಮಂಡಳಿಯ ಕೋಟಾದಡಿ ತುಂಬಿಕೊಳ್ಳಲು ಅವಕಾಶವಿರುತ್ತದೆ.

ಬಹಳಷ್ಟು ಬಿಎಡ್ ಕಾಲೇಜುಗಳ ಆಡಳಿತ ಮಂಡಳಿಗಳು ಸರ್ಕಾರಿ ಕೋಟಾದ ಸೀಟುಗಳನ್ನು ವಿಶ್ವವಿದ್ಯಾಲಯದ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸದೇ, ಸರ್ಕಾರದ ಪೂರ್ವಾನುಮತಿಯನ್ನು ಪಡೆಯದೆ, ಸರ್ಕಾರದ ಅನುಮತಿಯನ್ನು ನಿರೀಕ್ಷಿಸಿ, ಆಡಳಿತ ಮಂಡಳಿ ಕೋಟಾದಡಿ ಸರ್ಕಾರಿ ಕೋಟಾದ ಖಾಲಿ ಸೀಟುಗಳನ್ನು ಭರ್ತಿ ಮಾಡಿಕೊಳ್ಳುತ್ತಿರುವುದು ನಿಯಮಬಾಹಿರವಾಗಿರುತ್ತದೆ. ಈ ರೀತಿ ಕ್ರಮವನ್ನು ಸರ್ಕಾರವು ಒಪ್ಪುವುದಕ್ಕೆ ಸಾಧ್ಯವಿರುವುದಿಲ್ಲ. ಇದರಿಂದ ಈ ರೀತಿ ಸೀಟುಗಳಿಗೆ ದಾಖಲಾಗಿರುವ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಮತ್ತು ವಿದ್ಯಾರ್ಥಿಗಳು ಒತ್ತಡ ಅನುಭವಿಸಿದಂತಾಗುತ್ತದೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ಅನುಮತಿಯನ್ನು ನಿರೀಕ್ಷಿಸಿ, ಸರ್ಕಾರದ ಕೋಟಾದಡಿ ಬಾಕಿ ಇರುವ ಸೀಟುಗಳನ್ನು ಭರ್ತಿ ಮಾಡಿಕೊಳ್ಳದಂತೆ ಮತ್ತು ಸದರಿ ಸರ್ಕಾರಿ ಕೋಟಾದಡಿ ಬಾಕಿ ಇರುವ ಸೀಟುಗಳನ್ನು ಸರ್ಕಾರದ ಅನುಮತಿಯೊಂದಿಗೆ ಮಾತ್ರ ಭರ್ತಿ ಮಾಡಿಕೊಳ್ಳುವಂತೆ ಹಾಗೂ ಯಾವುದೇ ಕಾರಣಕ್ಕೆ ವಿದ್ಯಾರ್ಥಿಗಳ ಹಿತಾಸಕ್ತಿಗೆ ಧಕ್ಕೆ ತರದಂತೆ ಸಂಬಂಧಿಸಿದ ಎಲ್ಲಾ ಶಿಕ್ಷಣ ಮಹಾವಿದ್ಯಾಲಯಗಳಿಗೆ ಈ ಮೂಲಕ ಸೂಚಿಸಲಾಗಿದೆ.

(ಸಂಧ್ಯಾ ಎಲ್. ನಾಯಕ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ. (ವಿಶ್ವವಿದ್ಯಾಲಯಗಳು-2).

ಇವರಿಗೆ :-

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು. ಸದರಿ ಸುತ್ತೋಲೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, 50 ಪ್ರತಿಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ. ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಕಳುಹಿಸಲು ಕೋರಲಾಗಿದೆ.

ಪ್ರತಿಗಳು:-

1) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು,
2) ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರುಗಳು.
2) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರ ಆಪ್ತ ಕಾರ್ಯದರ್ಶಿ.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ. ಉನ್ನತ ಶಿಕ್ಷಣ ಇಲಾಖೆ.
4) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.